# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀಮತಿ ನರಸಮ್ಮ ಗಂಡ ಶ್ರೀ ಸಾಯಣ್ಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಮತ್ತಯ್ಯ, ಶ್ರೀಮತಿ ಮಾರುತಮ್ಮ ಗಂಡ ಶ್ರೀ ಅಂಜಿನಯ್ಯ, ಶ್ರೀಮತಿ ಹೇಮಲಮ್ಮ ಗಂಡ ಶ್ರೀ ಲಕ್ಷ್ಮಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಬೂದೆಪ್ಪ, ಶ್ರೀಮತಿ ಲಕ್ಷ್ಮಿ ಗಂಡ ಶ್ರೀ ಹನುಮಂತ ಮತ್ತು ಶ್ರೀಮತಿ ಗೋವಿಂದಮ್ಮ ಗಂಡ ಶ್ರೀ ತಿಮ್ಮಪ್ಪ, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಅಧೀನ ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ರವರ ಪತ್ರ ಸಂಖ್ಯೆ: ರಾಚುಆ:06.ನ್ಯಾಪ್ರಜಿಪಿ.2018, ದಿನಾಂಕ: 22-02-2017.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 229 ಗ್ರಾಪಂಅ 2018, ದಿನಾಂಕ:08-03-2018 ರ ಕಾರಣ ಕೇಳುವ ನೋಟೀಸ್.
3. ಶ್ರೀಮತಿ ಮಾರುತಮ್ಮ ಗಂಡ ಶ್ರೀ ಅಂಜಿನಯ್ಯ, ಸದಸ್ಯರು ಮತ್ತು ಇತರೆ ಸದಸ್ಯರುಗಳು, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:05-04-2018 ಮತ್ತು ಸ್ವೀಕೃತಿ ದಿನಾಂಕ: 31-03-2018.
4. ಇದೇ ಸಮಸಂಖ್ಯೆಯ ವಿಚಾರಣಾ ನೋಟೀಸಿನ ದಿನಾಂಕ: 07-06-2018, 31-01-2018 ಮತ್ತು 02-07-2019. ವಿಚಾರಣೆ ನಡೆದ ದಿನಾಂಕ: 29-06-2018, 05-02-2019 ಮತ್ತು 06-07-2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಶ್ರೀಮತಿ ನರಸಮ್ಮ ಗಂಡ ಶ್ರೀ ಸಾಯಣ್ಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಮತ್ತಯ್ಯ, ಶ್ರೀಮತಿ ಮಾರುತಮ್ಮ ಗಂಡ ಶ್ರೀ ಅಂಜಿನಯ್ಯ, ಶ್ರೀಮತಿ ಹೇಮಲಮ್ಮ ಗಂಡ ಶ್ರೀ ಲಕ್ಷ್ಮಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಬೂದೆಪ್ಪ, ಶ್ರೀಮತಿ ಲಕ್ಷ್ಮಿ ಗಂಡ ಶ್ರೀ ಹನುಮಂತ ಮತ್ತು ಶ್ರೀಮತಿ ಗೋವಿಂದಮ್ಮ ಗಂಡ ಶ್ರೀ ತಿಮ್ಮಪ್ಪ, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರುಗಳು ದಿನಾಂಕ: 23.07.2015 ರಿಂದ 20.09.2017 ರವರೆಗೆ ನಡೆದ ಸಾಮಾನ್ಯ ಹಾಗೂ ಇನ್ನಿತರೆ ಸಭೆಗಳಿಗೆ ಪೂರ್ವಾನುಮತಿ ಇಲ್ಲದೇ ಗೈರು ಹಾಜರಾಗಿರುತ್ತಾರೆ ಆದ್ದರಿಂದ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 13 ರನ್ವಯ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು ಜಿಲ್ಲೆ ರವರು ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರವರಿಗೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(1)(iii) ರನ್ವಯ ಕ್ರಮ ಕೈಗೊಳ್ಳುವಂತೆ ವರ್ಗಾಯಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ರಡಿ ಕ್ರಮವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ: 08-03-2018 ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

- ಶ್ರೀಮತಿ ಮಾರುತಮ್ಮ ಗಂಡ ಶ್ರೀ ಅಂಜಿನಯ್ಯ, ಸದಸ್ಯ ರವರು ದಿನಾಂಕ: 23-07-2015 ರಿಂದ 20-09-2017 ರವರೆಗೆ ಭಾಗಶ: ಸಭೆಗಳಲ್ಲಿ ಹಾಜರಾಗಿರುವುದಾಗಿ ಕೆಲವು ಸಭೆಗಳಿಗೆ ಅನಾರೋಗ್ಯದ ನಿಮಿತ್ತ ಹಾಜರಾಗಿರುವುದಿಲ್ಲ. ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ನನ್ನ ಸದಸ್ಯತ್ವವನ್ನು ರದ್ದುಗೊಳಿಸಬೇಕೆಂಬ ಕೆಟ್ಟ ಮನಸ್ಸಿನಿಂದ ನನ್ನ ಮೇಲೆ ದೂರು ಸಲ್ಲಿಸಿರುತ್ತಾರೆ. ಆದ್ದರಿಂದ ಯಾವುದೇ ಕ್ರಮ ಕೈಗೊಳ್ಳದಂತೆ ಕೋರಿರುತ್ತಾರೆ.
- ಶ್ರೀಮತಿ ನರಸಮ್ಮ ಗಂಡ ಶ್ರೀ ಸಾಯಣ್ಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಮತ್ತಯ್ಯ, ಶ್ರೀಮತಿ ಹೇಮಲಮ್ಮ ಗಂಡ ಶ್ರೀ ಲಕ್ಷ್ಮಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಬೂದೆಪ್ಪ, ಶ್ರೀಮತಿ ಲಕ್ಷ್ಮಿ ಗಂಡ ಶ್ರೀ ಹನುಮಂತ ಮತ್ತು ಶ್ರೀಮತಿ ಗೋವಿಂದಮ್ಮ ಗಂಡ ಶ್ರೀ ತಿಮ್ಮಪ್ಪ, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ರವರುಗಳು ತಾವು ಅನಕ್ಷರಸ್ಥ ಮಹಿಳಾ ಸದಸ್ಯರಾಗಿದ್ದು, ತಮಗೆ ದಿನಾಂಕ: 03-07-2015 ರಿಂದ 20-09-2017 ರವರೆಗೆ ನಾಲ್ಕು ಒಂದಾಂದ ಮೇಲೊಂದರಂತೆ ನಡೆದ ಸಾಮಾನ್ಯ ಹಾಗೂ ಇನ್ನಿತರ ಸಭೆಗಳಿಗೆ ಹಾಜರಾಗಲು ತಿಳಿಸಿ ಯಾವುದೇ ತರಹದ ನೋಟೀಸ್ ನೀಡಿರುವುದಿಲ್ಲ. ಬದಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಇಲ್ಲಸಲ್ಲದ ಆರೋಪಗಳನ್ನು ಹೋರಿಸಿ ಸದಸ್ಯತ್ವವನ್ನು ರದ್ದುಪಡಿಸಲು ಪ್ರಯತ್ನಸಿದ್ದಾರೆ. ಅಧ್ಯಕ್ಷರಿಗೆ ಸುಮಾರು ಸಾಮಾನ್ಯ ಸಭೆಯನ್ನು ಕರೆಯುವಂತೆ ವಿನಂತಿಸಿಕೊಂಡರೂ ಯಾವುದೇ ಮಾಹಿತಿಯನ್ನು ನೀಡದೆ ತಾವೇ ಸಾಮಾನ್ಯ ಸಭೆಗಳನ್ನು ಮಾಡಿಕೊಂಡು ನಮಗೆ ಸಾಮಾನ್ಯ ಸಭೆಯ ನೋಟೀಸ್ ನೀಡಿರುವಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಮತ್ತು ಅಧ್ಯಕ್ಷರಾದ ಶ್ರೀಮತಿ ಶರಣಮ್ಮ ಗಂಡ ತಿಮ್ಮಪ್ಪ, ಇವರು ಹಾಗೂ ಶ್ರೀಮತಿ ಸುಜಾತ ಗಂಡ ನರಸಿಂಹನಾಯಕ, ಉಪಾಧ್ಯಕ್ಷರು ಇವರುಗಳ ಪತಿಯವರೇ ಆಡಳಿತವನ್ನು ನಡೆಸುತ್ತಿದ್ದಾರೆ. ಆದ್ದರಿಂದ ಅಧ್ಯಕ್ಷರ ಮೇಲೆ ತಾವು ಸೂಕ್ತ ಕ್ರಮ ಕೈಗೊಳ್ಳುವಂತೆ ವಿನಂತಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:29.06.2018 ರಂದು ನಡೆದ ವಿಚಾರಣೆಯಲ್ಲಿ ಮೂಲ ದಾಖಲೆಗಳನ್ನು ಹಾಜರುಪಡಿಸುವಂತೆ ಆದೇಶಿಸಿ ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಗಿದೆ. ದಿನಾಂಕ: 05-06-2019 ರಂದು ನಡೆದ ವಿಚಾರಣೆಯಲ್ಲಿ ಆಪಾದಿತ ಸದಸ್ಯರುಗಳು ಕಾಲಾವಕಾಶ ಕೋರಿರುವುದರಿಂದ ವಿಚಾರಣೆಯನ್ನು ಮುಂದೂಡಲಾಗಿದೆ. ದಿನಾಂಕ: 06-07-2019 ರಂದು ನಡೆದ ವಿಚಾರಣೆಯಲ್ಲಿ ಆಪಾದಿತ ಸದಸ್ಯರುಗಳು ಕಾರಣನಂತರಗಳಿಂದ ಗೈರು ಹಾಜರಾಗುತ್ತಿದ್ದೇವು ಹಾಗೂ ಅನುಕೂಲವಿದ್ದಲ್ಲಿ ಸಭೆಗೆ ಹಾಜರಾಗುತ್ತಿದ್ದೇವು, ಇನ್ನು ಮುಂದೆ ಸಭೆಗಳಿಗೆ ಹಾಜರಾಗುತ್ತೇವೆ ಎಂದು ಹೇಳಿಕೆ ನೀಡಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ರಾಯಚೂರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರವರುಗಳು ಹಾಜರಿದ್ದು, ಜಂಬಲದಿನ್ನಿ ಗ್ರಾಮ ಪಂಚಾಯಿತಿಯ ಆಪಾದಿತ ಸದಸ್ಯರುಗಳು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆ ಹಾಗೂ ಇತರೆ ಸಭೆಗಳಿಗೆ ಗೈರು ಹಾಜರಾಗಿರುವ ಬಗ್ಗೆ ದಾಖಲೆಗಳೊಂದಿಗೆ ತಿಳಿಸಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(1)(iii) ಪಂಚಾಯತ್‌ನ ನಾಲ್ಕು ಒಂದಾದ ಮೇಲೊಂದರಂತೆ ಆದ ಸಭೆಗಳಿಗೆ ಹಾಜರಾಗಲು ತಪ್ಪಿದ್ದರೆ ಮತ್ತು ಅಧ್ಯಕ್ಷನಾಗಲಿ ಅಥವಾ ಉಪಾಧ್ಯಕ್ಷನಾಗಲಿ ಸಭೆಯನ್ನು ಕರೆಯಬೇಕಾಗಿದ್ದಾಗ ಅಥವಾ ಅಗತ್ಯವಾಗಿದ್ದಾಗ ಒಂದಾದ ಮೇಲೊಂದರಂತೆ ನಡೆಯಬೇಕಾದ ಎರಡು ಸಭೆಗಳನ್ನು ಕರೆಯಲು ತಪ್ಪಿದ್ದಾನೆಂದು ಕಂಡು ಬಂದರೆ ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದಾರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದು ಹಾಕಬಹುದು ಎಂದು ತಿಳಿಸಿದೆ ಅದರಂತೆ ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತರ ಲಿಖಿತ ಮತ್ತು ಮೌಖಿಕ ಹೇಳಿಕೆಗಳನ್ನು ಪರಿಶೀಲಿಸಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಿನಾಂಕ: 23.07.2015 ರಿಂದ 20.09.2017 ರವರೆಗೆ ನಡೆದ ಸಾಮಾನ್ಯ ಹಾಗೂ ಇನ್ನಿತರೆ ಸಭೆಗಳಿಗೆ ಪೂರ್ವಾನುಮತಿ ಇಲ್ಲದೇ ಗೈರು ಹಾಜರಾಗಿರುವುದು ಕಂಡುಬಂದಿರುವುದನ್ನು ಗಮನಿಸಿ, ಶ್ರೀಮತಿ ನರಸಮ್ಮ ಗಂಡ ಶ್ರೀ ಸಾಯಣ್ಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಮತ್ತಯ್ಯ, ಶ್ರೀಮತಿ ಮಾರುತಮ್ಮ ಗಂಡ ಶ್ರೀ ಅಂಜಿನಯ್ಯ, ಶ್ರೀಮತಿ ಹೇಮಲಮ್ಮ ಗಂಡ ಶ್ರೀ ಲಕ್ಷ್ಮಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಬೂದೆಪ್ಪ, ಶ್ರೀಮತಿ ಲಕ್ಷ್ಮಿ ಗಂಡ ಶ್ರೀ ಹನುಮಂತ ಮತ್ತು ಶ್ರೀಮತಿ ಗೋವಿಂದಮ್ಮ ಗಂಡ ಶ್ರೀ ತಿಮ್ಮಪ್ಪ, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು

ಜಿಲ್ಲೆ ಇವರುಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(1)(iii) ಜಂಬಲದಿನ್ನಿ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 229 ಗ್ರಾಪಂಅ 2018,**
**ಬೆಂಗಳೂರು, ದಿನಾಂಕ:10-01-2020.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆಪಾದಿತ ಸದಸ್ಯರುಗಳಾದ ಶ್ರೀಮತಿ ನರಸಮ್ಮ ಗಂಡ ಶ್ರೀ ಸಾಯಣ್ಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಮತ್ತಯ್ಯ, ಶ್ರೀಮತಿ ಮಾರುತಮ್ಮ ಗಂಡ ಶ್ರೀ ಅಂಜಿನಯ್ಯ, ಶ್ರೀಮತಿ ಹೇಮಲಮ್ಮ ಗಂಡ ಶ್ರೀ ಲಕ್ಷ್ಮಣ, ಶ್ರೀಮತಿ ಜಯಮ್ಮ ಗಂಡ ಶ್ರೀ ಬೂದೆಪ್ಪ, ಶ್ರೀಮತಿ ಲಕ್ಷ್ಮಿ ಗಂಡ ಶ್ರೀ ಹನುಮಂತ ಮತ್ತು ಶ್ರೀಮತಿ ಗೋವಿಂದಮ್ಮ ಗಂಡ ಶ್ರೀ ತಿಮ್ಮಪ್ಪ, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರುಗಳು ಜಂಬಲದಿನ್ನಿ ಗ್ರಾಮ ಪಂಚಾಯಿತಿಯ ದಿನಾಂಕ: 23.07.2015 ರಿಂದ 20.09.2017 ರವರೆಗೆ ನಡೆದ ಸಾಮಾನ್ಯ ಹಾಗೂ ಇನ್ನಿತರೆ ಸಭೆಗಳಿಗೆ ಪೂರ್ವಾನುಮತಿ ಇಲ್ಲದೇ ಗೈರು ಹಾಜರಾಗಿರುವುದು ಖಚಿತವಾಗಿರುತ್ತದೆ. ಆದ್ದರಿಂದ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 1993 ರ ಪ್ರಕರಣ 43(1)(iii) ರನ್ವಯ ಸದರಿಯವರುಗಳನ್ನು ಜಂಬಲದಿನ್ನಿ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನದಿಂದ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಮೇಶ್ ಡಿ.ಓ) 10/01/20
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
10/1/20

**ಗೆ:**

1) ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು ಜಿಲ್ಲೆ.
3) ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ರಾಯಚೂರು, ರಾಯಚೂರು ಜಿಲ್ಲೆ.
4) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.
5) ಶ್ರೀಮತಿ ನರಸಮ್ಮ ಗಂಡ ಶ್ರೀ ಸಾಯಣ್ಣ, ಸದಸ್ಯರು, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.
6) ಶ್ರೀಮತಿ ಜಯಮ್ಮ ಗಂಡ ಶ್ರೀ ಮತ್ತಯ್ಯ, ಸದಸ್ಯರು, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.
7) ಶ್ರೀಮತಿ ಮಾರುತಮ್ಮ ಗಂಡ ಶ್ರೀ ಅಂಜಿನಯ್ಯ, ಸದಸ್ಯರು, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.
8) ಶ್ರೀಮತಿ ಹೇಮಲಮ್ಮ ಗಂಡ ಶ್ರೀ ಲಕ್ಷ್ಮಣ, ಸದಸ್ಯರು, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.
9) ಶ್ರೀಮತಿ ಜಯಮ್ಮ ಗಂಡ ಶ್ರೀ ಬೂದೆಪ್ಪ, ಸದಸ್ಯರು, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.

10) ಶ್ರೀಮತಿ ಲಕ್ಷ್ಮಿ ಗಂಡ ಶ್ರೀ ಹನುಮಂತ, ಸದಸ್ಯರು, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.
11) ಶ್ರೀಮತಿ ಗೋವಿಂದಮ್ಮ ಗಂಡ ಶ್ರೀ ತಿಮ್ಮಪ್ಪ, ಸದಸ್ಯರು, ಜಂಬಲದಿನ್ನಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.
12) ಗಣಕ ಕೋಶ–ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
13) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನಿರ್ದೇಶಕರು(ಪಂ.ರಾಜ್–1), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.